ಆ), ಈ ಕಾಮಗಾರಿಗಳಿಗಾಗಿ ಮಂಜೂರು ಮಾಡಿದ ಒಟ್ಟು ಮೊತ್ತ ರೂ. 45.00 ಲಕ್ಷಗಳು.

ಇ) ಅನುದಾನ ಲಭ್ಯತೆಗನುಗುಣವಾಗಿ ಆದ್ಯತೆ ಮೇರೆಗೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

5787 (6643) ಶ್ರೀ ರಘುಪತಿ ಭಟ್ .ಕೆ (ಉಡುಪಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯತ್‌ಗಳಿಗೆ ಅಧಿಕಾರ ವಿಕೇಂದ್ರೀಕರಣದಿಂದ ಯಾವ ಅಧಿಕಾರಗಳನ್ನು ನೀಡಲಾಗಿದೆ;

ಆ) ಅಧಿಕಾರ ವಿಕೇಂದ್ರೀಕರಣ ಜಾರಿಗೆ ಬರುವ ಮೊದಲು ಗ್ರಾಮ ಪಂಚಾಯತ್‌ಗಳಲ್ಲಿ ಅಧಿಕಾರಗಳನ್ನು ಮೇಲ್ದರ್ಜೆಗೇರಿಸಲಾಗಿದೆಯೇ;

ಇ) ಗ್ರಾಮ ಪಂಚಾಯತ್‌ಗಳನ್ನು ಸಬಲೀಕರಣಗೊಳಿಸಲು ಯಾವ ಹಣಕಾಸಿನ ನೆರವು ನೀಡಲಾಗುವುದು;

ಈ) ಗ್ರಾಮ ಪಂಚಾಯತ್‌ಗಳಿಗೆ ಕಳೆದ 3 ವರ್ಷಗಳಲ್ಲಿ ನೀಡಿದ ಅನುದಾನ ಎಷ್ಟು; ಮುಂದೆ ಎಷ್ಟು ಅನುದಾನ ನೀಡಲಾಗುವುದು;

ಉ) ಬೇಲೂರು ಘೋಷಣೆಯ ಎಲ್ಲಾ ವಿಷಯಗಳೂ ಸೇರಿದಂತೆ ಹನಕಾಸಿನ ಬೇಡಿಯಕೆಯನ್ನು ಗ್ರಾಮ ಪಂಚಾಯತ್‌ಗಳಿಗೆ ನೀಡಲಾಗಿದೆಯೇ; (ಘೋಷಣೆಯ ನಂತರದ ವಿವರ ನೀಡುವುದು):

ಡಾ॥ ಹೆಚ್. ಸಿ. ಮಹದೇವಪ್ಪ, (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಅನುಸೂಚಿ–1 ರಲ್ಲಿ ಸೂಚಿಸಿರುವ ಎಲ್ಲಾ ಯೋಜನೆಗಳು ಹಾಗೂ ಚಟುವಟಿಕೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಲಾಗಿದೆ.

ಆ) ಇಲ್ಲ.

ಇ) ಸರ್ಕಾರವು ಪ್ರತಿ ಗ್ರಾಮ ಪಂಚಾಯತಿಗೆ ವಾರ್ಷಿಕ ಶಾಸನಬದ್ಧ ಅನುದಾನ ರೂ.5.00 ಲಕ್ಷಗಳನ್ನು ನೀಡುತ್ತಿದೆ.

ಈ) ಗ್ರಾಮ ಪಂಚಾಯಿತಿಗೆ ನೀಡಲಾಗುತ್ತಿರುವ ಶಾಸನಬದ್ಧ ಅನುದಾನದ ವಿವರ:

2002–03	ರೂ. 3.5 ಲಕ್ಷ
2003–04	ರೂ. 5.00 ಲಕ್ಷ
2004–05	ರೂ. 5.00 ಲಕ್ಷ

2005–06ನೇ ಸಾಲಿಗೆ ರೂ. 5.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಉ) ಅನುಬಂಧ–1 ರಲ್ಲಿ ನೀಡಲಾಗಿದೆ.

ಅನುಬಂಧ – 1

1. ಗ್ರಾಮೀಣ ವಸತಿ ಯೋಜನೆಗಳು, ಜಲಾನಯನ ಕಾರ್ಯಕ್ರಮಗಳು, ನೈರ್ಮಲ್ಯ, ಕುಡಿಯುವ ನೀರು ಇನ್ನೂ ಮುಂತಾದ ಕಾರ್ಯಕ್ರಮಗಳು ಹಾಗೂ ಅವುಗಳಿಗೆ ಸಂಬಂಧಿಸಿದಂತೆ ಅನುದಾನವನ್ನು ಸಹ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

2. ಅಕ್ಷರ ದಾಸೋಹ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯಿತಿ ಮೇಲ್ವಿಚಾರಣೆಯಲ್ಲಿ ಗ್ರಾಮ ಪಂಚಾಯತಿಗಳಿಗೆ ವಹಿಸಲಾಗಿದೆ.

3. ನ್ಯಾಯಬೆಲೆ ಅಂಗಡಿಗಳನ್ನು ಗ್ರಾಮ ಪಂಚಾಯಿತಿಗಳ ಮೇಲ್ವಿಚಾರಣೆಗೆ ವಹಿಸುವ ಪ್ರಕ್ರಿಯೆ ಆರಂಭವಾಗಿದೆ.

4. ಗ್ರಾಮಮಟ್ಟದ ಕಂದಾಯ ಸಿಬ್ಬಂದಿ ಮತ್ತು ಜವಾಬ್ದಾರಿಗಳನ್ನು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ತರಲು ಕಂದಾಯ ಇಲಾಖೆ ಸಹಮತಿ ನೀಡಿರುವುದಿಲ್ಲ.

5. ಹಾಗೆಯೇ ಗ್ರಾಮ ಪಂಚಾಯಿತಿಗಳಿಗೆ ಕಾರ್ಯಕ್ರಮವಾರು ಅನುದಾನ ಹಂಚಿಕೆ ಮಾಡಲಾಗಿದ್ದು, 200506ನೇ ಸಾಲಿಗೆ ರೂ. 1588.76 ಕೋಟಿ, ಪ್ರತಿ ಪಂಚಾಯಿತಿಗೆ ತಲಾ ರೂ. 28.10 ಲಕ್ಷ ವಾರ್ಷಿಕ ಅನುದಾನ ಲಭ್ಯವಾಗುತ್ತದೆ.

6. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಾರ್ಯಕ್ರಮಗಳ ಜಟುವಟಿಕೆ ನಕ್ಷೆಯನ್ನು ಸಿದ್ಧಪಡಿಸಿ, ಆ ಪ್ರಕಾರ ಹಂಚಿಕೆ ಮಾಡಿ ಜವಾಬ್ದಾರಿ ನೀಡಲಾಗಿದೆ.

7. ದಿನಾಂಕ : 16102004ರ ಸರ್ಕಾರಿ ಆದೇಶದ ಮೂಲಕ ರಾಜ್ಯ ವಲಯದಿಂದ ಕಾರ್ಯಕ್ರಮಗಳನ್ನು ಜಿಲ್ಲಾ ವಲಯಕ್ಕೆ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ವಹಿಸಿಕೊಡಲಾಗಿದೆ.

5788 (6591) ಶ್ರೀ ರೇಣುಕಾಚಾರ್ಯ ಎಂ. ಪಿ. (ಹೊನ್ನಾಳಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ 2003–04, 2004–05, 2005–06ನೇ ಸಾಲಿನಲ್ಲಿ ರಾಜ್ಯಕ್ಕೆ ಬಿಡುಗಡೆಯಾದ ಹಣವೆಷ್ಟು; ವಿವರ ನೀಡುವುದು;

ಆ) ಬಿಡುಗಡೆಯಾದ ಹಣವನ್ನು ಯಾವ ಯಾವ ಕಾರ್ಯಗಳಲ್ಲಿ ವಿನಿಯೋಗಿಸಲಾಗಿದೆ; ವಿವರ ನೀಡುವುದು;

ಇ) ಈ ಹಣ ದುರುಪಯೋಗ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು;

ಶ್ರೀ ಆರ್. ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ರಾಜ್ಯಕ್ಕೆ ಬಿಡುಗಡೆಯಾದ ಹಣದ ವಿವರ:

ಬಿಡುಗಡೆಯಾದ ಹಣ ರೂ. ಲಕ್ಷಗಳಲ್ಲಿ.

ವರ್ಷ	ಕೇಂದ್ರ	ರಾಜ್ಯ	ಒಟ್ಟು
2003–04	8474.65	1259.00	9733.650
2004–05	26280.70	10650.00	36930.700
2005–06(ಈವರೆಗೆ)	15868.46	3117.835	18986.295
ಒಟ್ಟು	**50623.810**	**15026.835**	**65650.645**

ಆ) ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಕೈ ಗೊಂಡಿರುವ ಕಾರ್ಯಕ್ರಮಗಳ ವಿವರ :